Office of the Principal Director,
T.T.M.C. Building, 3rd Floor, 'A' Block, B.M.T.C.,
Shanthinagar, Bengaluru-560 027.
Phone No:- 080- 22214817
Fax No.:- 080- 22214817
E-mail: controllerstateaccounts@yahoo.com

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ

ಪ್ರಧಾನ ನಿರ್ದೇಶಕರ ಕಚೇರಿ,
ಟಿ.ಟಿ.ಎಂ.ಸಿ. ಕಟ್ಟಡ, ೩ನೇ ಮಹಡಿ, 'ಎ' ಬ್ಲಾಕ್,
ಬಿ.ಎಂ.ಟಿ.ಸಿ., ಶಾಂತಿನಗರ, ಬೆಂಗಳೂರು-೫೬೦ ೦೨೭.
ದೂರವಾಣಿ ಸಂಖ್ಯೆ:- ೦೮೦- ೨೨೨೧೪೮೧೭
ಫ್ಯಾಕ್ಸ್ ಸಂಖ್ಯೆ:- ೦೮೦- ೨೨೨೧೪೮೧೭
ಇ-ಮೇಲ್: controllerstateaccounts@yahoo.com

ಸಂಖ್ಯೆ:ಸಿಎಸ್ಎ 02 ಇತರೆ 2023 /184 ದಿ:21-04-2023

## ಸುತ್ತೋಲೆ

ವಿಷಯ: ಭೌತಿಕ ರೂಪದಲ್ಲಿ ಅನುಮೋದನೆಯಾಗಿರುವ ಕಛೇರಿಯ ಎಲ್ಲಾ ಪತ್ರಗಳು / ಪ್ರಸ್ತಾವನೆಯನ್ನು ಇ – ಆಫೀಸ್‌ನಲ್ಲಿನ ಕಡತದಲ್ಲಿ ಅಡಕಗೊಳಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 68 ಕತವ 2019 ದಿ:30-11-2019.
2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 24 ಪಿಆರ್‌ಜೆ 2020 ದಿ:18-01-2021.
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ (ಆ.ಸು) 56 ಕತವ 2021 ದಿ:15-09-2021.
4. ಈ ಕಛೇರಿಯ ಸುತ್ತೋಲೆ ಸಂಖ್ಯೆ: ರಾಲೆಪ 08 ಸಿಅಇ 2020 ದಿ:01-12-2020.
5. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿಎಸ್ಎ 02 ಇತರೆ 2020 ದಿ:07-07-2021, 23-07-2021, 17-09-2021 ಮತ್ತು 25-04-2022

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಿಂದ (3) ರವರೆಗಿನ ಸರ್ಕಾರದ ಆದೇಶದಲ್ಲಿ ಎಲ್ಲಾ ಇಲಾಖಾ ಮುಖ್ಯಸ್ಥರುಗಳ ಕಛೇರಿಗಳಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸುವಂತೆ ಹಾಗೂ ಪ್ರಸ್ತಾವನೆಗಳು, ಪತ್ರಗಳು ಹಾಗೂ ವರದಿಗಳನ್ನು ಸಂಬಂಧಪಟ್ಟ e-office ಮೂಲಕವೇ ಚಲನವಲನಗೊಳಿಸಬೇಕೆಂದು ಆದೇಶಿಸಲಾಗಿರುತ್ತದೆ. ಅದರಂತೆ ಉಲ್ಲೇಖ (4) ಮತ್ತು (5) ರಲ್ಲಿನ ಕಛೇರಿ ಸುತ್ತೋಲೆಗಳಲ್ಲಿ ಕಛೇರಿಯ ಸ್ವೀಕೃತ ಶಾಖೆಯಲ್ಲಿ ಸ್ವೀಕೃತಗೊಳ್ಳುವ ಎಲ್ಲಾ ಪತ್ರಗಳು / ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಶಾಖೆಯ ವಿಷಯ ನಿರ್ವಾಹಕರಿಗೆ ನೇರವಾಗಿ ಭೌತಿಕ ರೂಪದಲ್ಲಿ ತಲುಪಿಸದೇ ಕಡ್ಡಾಯವಾಗಿ ಇ – ಆಫೀಸ್ ಮುಖಾಂತರವೆ ಕಳುಹಿಸುವಂತೆ ಹಾಗೂ ಎಲ್ಲಾ ಶಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ವೀಕೃತಗೊಳ್ಳುವ ಪತ್ರಗಳನ್ನು ಇ – ಆಫೀಸ್ ಮುಖಾಂತರವೇ ಸ್ವೀಕರಿಸಿ ಇಲಾಖಾ ಮುಖ್ಯಸ್ಥರಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಸೂಚಿಲಾಗಿರುತ್ತದೆ.

ಆದರೆ ಸರ್ಕಾರದಿಂದ ಸ್ವೀಕೃತವಾಗುವ ನಿರ್ದೇಶನ ಹಾಗೂ ಪತ್ರಗಳ ಆದ್ಯತಾನುಸಾರ ತುರ್ತು ಸಂಧರ್ಭದಲ್ಲಿ ಭೌತಿಕವಾಗಿ ಮಂಡಿಸಲಾಗಿರುವ ಪ್ರಸ್ತಾವನೆಗಳು e-office ಕಡತಗಳಲ್ಲಿ ಲಭ್ಯವಿಲ್ಲದಂತಾಗುತ್ತದೆ.

ಆದುದರಿಂದ, ಈವರೆವಿಗೂ ಭೌತಿಕವಾಗಿ ಮಂಡಿಸಲಾಗಿರುವ ಪ್ರಸ್ತಾವನೆಗಳನ್ನು ಸ್ಕ್ಯಾನ್ ಮಾಡಿ e-office ನಲ್ಲಿ ಸಂಬಂಧಪಟ್ಟ ಕಡತಗಳಿಗೆ ಅಡಕಗೊಳಿಸುವಂತೆ ಎಲ್ಲಾ ವಿಷಯ ನಿರ್ವಾಹಕರಿಗೆ ಸೂಚಿಸಿದೆ.

ಪ್ರಧಾನ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು.

**ಪ್ರತಿಯನ್ನು:**

1. ಕಛೇರಿಯ ಎಲ್ಲಾ ಶಾಖೆಯ ಲೆಕ್ಕಪರಿಶೋಧನಾಧಿಕಾರಿಗಳು/ಲೆಕ್ಕಾಧೀಕ್ಷಕರು/ಸಿಬ್ಬಂದಿ ವರ್ಗದವರಿಗೆ.

...2

2. ತರಬೇತಿ ಶಾಖೆಗೆ ಅಂತರ್ಜಾಲದಲ್ಲಿ ಅಳವಡಿಸಲು.
3. ಕಛೇರಿಯ ಸೂಚನಾ ಫಲಕಕ್ಕೆ.
4. ಕಛೇರಿ ಪ್ರತಿ.

**<u>ಮಾಹಿತಿಗಾಗಿ:</u>**

ನಿರ್ದೇಶಕರು/ಅಪರ ನಿರ್ದೇಶಕರು/ಜಂಟಿ ನಿರ್ದೇಶಕರು/ಉಪ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ/ಜಾಗೃತ ಕೋಶ/ಕ್ರೋಢೀಕೃತ ಶಾಖೆ/ಲೆಕ್ಕತನಿಖೆ)